# ಪರ್ಯಾಯ ಶೈಕ್ಷಣಿಕ ಯೋಜನೆ –2021–22

**9ನೇ ತರಗತಿ** **ಮಾಹೆ : ನವೆಂಬರ್** **ಪ್ರಥಮ ಭಾಷೆ – ಕನ್ನಡ**

| ತಿಂಗಳು/ ವಾರ | ಕಲಿಕಾ ಫಲಗಳು/ ಸಾಮರ್ಥ್ಯಗಳು | ಸಲಹಾತ್ಮಕ ಚಟುವಟಿಕೆ | ಮೌಲ್ಯಮಾಪನ ಚಟುವಟಿಕೆಗಳು |
|---|---|---|---|
| **ನವೆಂಬರ್**<br>ಮೊದಲನೇ ವಾರ | **ಗದ್ಯಪಾಠ – 4**<br>**ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್**<br>➢ ರಾಧಾಕೃಷ್ಣನ್ ಅವರ ಬಗ್ಗೆ ಸ್ಟಾಲಿನ್ ಅವರ ಅಭಿಪ್ರಾಯದ ಬಗ್ಗೆ ತಿಳಿದುಕೊಳ್ಳುವರು.<br>➢ ರಾಧಾಕೃಷ್ಣನ್ ಅವರ ಬಾಲ್ಯ ಮತ್ತು ಶಿಕ್ಷಣದ ಬಗ್ಗೆ ಮನದಟ್ಟು ಮಾಡಿಕೊಳ್ಳುವರು. | ➢ ಶಿಕ್ಷಕರು ವಿವಿಧ ಲೇಖಕರ ವ್ಯಕ್ತಿ ಚಿತ್ರಗಳ ಪರಿಚಯ ಮಾಡಿಕೊಡುತ್ತಾ ಅವುಗಳ ಬಗ್ಗೆ ಮಾಹಿತಿಯನ್ನು ಮಕ್ಕಳಿಂದ ಹೇಳಿಸುವುದು<br>➢ ರಾಧಾಕೃಷ್ಣನ್ ಅವರ ಬಗ್ಗೆ ವೀಡಿಯೋ ತುಣುಕುಗಳನ್ನು ಪ್ರದರ್ಶಿಸುವ ಮೂಲಕ ಅವರ ಬಗ್ಗೆ ಮಕ್ಕಳಿಂದ ಅಭಿಪ್ರಾಯಗಳನ್ನು ಬರೆಸುವುದು.<br>➢ ವಿದ್ಯಾರ್ಥಿಗಳಿಂದ ತಮಗೆ ಇಷ್ಟವಾದ ವ್ಯಕ್ತಿಗಳ ಹೆಸರನ್ನು ಪಟ್ಟಿಮಾಡಿಸಿ, ಆ ವ್ಯಕ್ತಿ ಬಗೆಗೆ ಇಷ್ಟವಾದ ಅಂಶಗಳನ್ನು ಹೇಳಿಸುವುದು. | ➢ ನಿಮಗೆ ತಿಳಿದಿರುವ ಭಾರತದ ಎಂಟು ಜನ ಪ್ರಸಿದ್ಧ ವ್ಯಕ್ತಿಗಳ ಹೆಸರನ್ನು ಬರೆಯಿರಿ.<br>➢ ರಾಧಾಕೃಷ್ಣನ್ ಅವರ ಜನ್ಮ ಸ್ಥಳ ಮತ್ತು ಜನ್ಮ ದಿನಾಂಕವನ್ನು ಬರೆಯಿರಿ. |
| ಎರಡನೇ ವಾರ | ❖ ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದ ಬಗ್ಗೆ ತಿಳಿಯುವರು<br>❖ ಹಿಂದೂ ಧರ್ಮದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವನ್ನು ಓದಿ ಅರಿತುಕೊಳ್ಳುವರು.<br>❖ ರಾಧಾಕೃಷ್ಣನ್ ಅವರು ರಾಷ್ಟ್ರಪತಿಯಾದ ಬಗ್ಗೆ ಮತ್ತು ಅವರು ಬರೆದಿರುವ ಕೃತಿಗಳ ಬಗ್ಗೆ ತಿಳಿದುಕೊಳ್ಳುವರು.<br>❖ ಜಶ್ತ್ವ ಸಂಧಿ, ಶ್ಚುತ್ವ ಸಂಧಿಗಳ ಬಗ್ಗೆ ತಿಳಿದುಕೊಳ್ಳುವರು. | ❖ ಮೈಸೂರಿನಲ್ಲಿ ನಡೆದ ವೈಭವಯುತ ಬೀಳ್ಕೊಡುಗೆ ಸಮಾರಂಭದ ಬಗ್ಗೆ ಮಕ್ಕಳಿಂದ ಮಾತನಾಡಿಸುವುದು.<br>❖ ಹಿಂದೂ ಧರ್ಮದ ಬಗ್ಗೆ ರಾಧಾಕೃಷ್ಣನ್ ಅವರ ಅಭಿಪ್ರಾಯವನ್ನು ಮಕ್ಕಳು ಚರ್ಚಿಸುವರು.<br>❖ ಉಪರಾಷ್ಟ್ರಪತಿ ಮತ್ತು ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ ಬಗ್ಗೆ ಹೆಮ್ಮೆ ಮತ್ತು ಸಂತಸ ವ್ಯಕ್ತಪಡಿಸುವರು .<br>❖ ಹೊಸ ಪದಗಳನ್ನು ಪಟ್ಟಿಮಾಡಿಸಿ ಅರ್ಥ ಬರೆಸುವುದು.<br>❖ ಜಶ್ತ್ವ ಮತ್ತು ಶ್ಚುತ್ವ ಸಂಧಿಗಳ ಉದಾಹರಣೆಗಳನ್ನು ನೀಡಿ ಸಂಧಿ ಬಿಡಿಸಲು ತಿಳಿಸುವುದು.<br>ಷಟ್+ಆನನ=ಷಡಾನನ<br>ಮನಸ್+ಶುದ್ಧಿ = ಮನಶ್ಶುದ್ಧಿ<br>❖ ಸಂಧಿ ಪದಗಳನ್ನು ಪಟ್ಟಿ ಮಾಡಿಸುವುದು. | ➢ ರಾಧಾಕೃಷ್ಣನ್ ಅವರು ಮದರಾಸಿನಲ್ಲಿ ಯಾವ ಹುದ್ದೆಯಿಂದ ಸೇವೆಯನ್ನು ಆರಂಭಿಸಿದರು?<br>➢ ಯಾರ ವಿಚಾರಧಾರೆಯು ಹಿಂದೂ ಧರ್ಮದ ಬಗ್ಗೆ ರಾಧಾಕೃಷ್ಣನ್ ಅವರನ್ನು ಆಕರ್ಷಿಸಿತು?<br>ಅಭ್ಯಾಸದ ಹಾಳೆ 1 ,2 |

| | | | |
|---|---|---|---|
| ಮೂರನೇ ವಾರ | **ಪದ್ಯ ಪಾಠ– 3.**<br>**ನಿಯತಿಯನಾರ್ ಮೀರದಪರ್**<br>➢ ಕವಿ ಜನ್ನನ ಪರಿಚಯವನ್ನು ಮಾಡಿಕೊಳ್ಳುವರು.<br>➢ ಯಶೋಧರ ಚರಿತೆ ಕೃತಿಯ ಬಗ್ಗೆ ತಿಳಿದುಕೊಳ್ಳುವರು.<br>➢ ಹಿಂಸೆಯ ದುಷ್ಫಲ ಮತ್ತು ಅಹಿಂಸೆಯ ಸತ್ಫಲಗಳನ್ನು ತಿಳಿಸುವ ಕಾವ್ಯದ ಬಗ್ಗೆ ತಿಳಿಯುವರು.<br>➢ ಪದ್ಯದಲ್ಲಿನ ವನದ–ಮುತ್ತುಗದ ಹೂವಿನ ವರ್ಣನೆಯ ಬಗೆಗೆ ತಿಳಿಯುವರು. | ➢ ಯೂಟ್ಯೂಬ್ / ಧ್ವನಿಮುದ್ರಕೆಗಳ ಮೂಲಕ ಅಥವಾ ಶಿಕ್ಷಕರು ಪದ್ಯವನ್ನು ವಾಚಿಸುವುದರ ಮೂಲಕ ಪದ್ಯವನ್ನು ಕೇಳಿಸುವುದು.<br>➢ ಕವಿ ಜನ್ನನ ಕಾಲ ಸ್ಥಳ, ಕೃತಿಗಳ ಬಗ್ಗೆ ಮಕ್ಕಳು ಪುಸ್ತಕ ನೋಡಿ ಬರೆಯುವಂತೆ ತಿಳಿಸುವುದು.<br>➢ ಪದ್ಯದ ಪೂರ್ವ ಕಥೆಯನ್ನು ಮಕ್ಕಳಿಂದ ಹೇಳಿಸುವುದು/ಓದಿಸುವುದು.<br>➢ ಅಹಿಂಸಾತತ್ವದ ಪಾಲನೆ ಮಾಡಿರುವ ವ್ಯಕ್ತಿಗಳ ಬಗ್ಗೆ ಮಕ್ಕಳಿಂದ ಮಾತನಾಡಿಸುವುದು.<br>ಉದಾ:– ಅಶೋಕ, ಗಾಂಧೀಜಿ ..<br>➢ ಮಾರಿದತ್ತ ಮತ್ತು ಪುರಜನರ ಸಂಭಾಷಣೆಯನ್ನು ಮಾಡಿಸುವುದು.<br>➢ ಪದ್ಯದಲ್ಲಿ ಬರುವ ಹೊಸ ಪದಗಳಿಗೆ ಸ್ವಂತವಾಕ್ಯ ಮಾಡಿಸುವುದು | ➢ ಕವಿ ಜನ್ನನ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ.<br>➢ ಕವಿಯು ಯಾವ ಹೂವನ್ನು ವರ್ಣಿಸಿದ್ದಾನೆ?<br>➢ ಪುರಜನರು ಜಾತ್ರೆಗೆ ಏಕೆ ನೆರೆದಿದ್ದರು? |
| ನಾಲ್ಕನೇ ವಾರ<br><br>ಪಠ್ಯಪೂರಕ ಅಧ್ಯಯನ ರಂಜಾನ್ ಸುರಕುಂಬಾ ಮತ್ತು ಸಂಭ್ರಮದ ಜೋಕಾಲಿ | ➢ ಛಂದಸ್ಸು:–ಮಾತ್ರಾಗಣ – ಪ್ರಸ್ತಾರ ಹಾಕುವ ನಿಯಮನ್ನು ತಿಳಿದು ಪ್ರಸ್ತಾರ ಹಾಕುವುದನ್ನು ಕಲಿಯುವರು.<br>➢ ಕಂದ ಪದ್ಯದ ಲಕ್ಷಣ ತಿಳಿದು ಪ್ರಸ್ತಾರ ಹಾಕುವುದನ್ನು ಕಲಿಯುವರು.<br>➢ ಭಾರತೀಯ ಹಬ್ಬದ ಆಚರಣೆಯ ಬಗ್ಗೆ ತಿಳಿಯುವರು.<br>➢ ರಂಜಾನ್ ಸುರಕುಂಬ ಹಾಗು ಜೋಕಾಲಿ ಹಬ್ಬದ ಆಚರಣೆಯ ವಿಧಿ ವಿಧಾನಗಳನ್ನು ತಿಳಿಯುವರು. | ➢ ಪದ ಮತ್ತು ಪದ್ಯದ ಸಾಲುಗಳನ್ನು ನೀಡಿ ಪ್ರಸ್ತಾರ ಹಾಕಿಸುವುದು<br>➢ ಕಂದ ಪದ್ಯದ ನಿಯಮವನ್ನು ತಿಳಿಸಿ ಪ್ರಸ್ತಾರ ಹಾಕಿಸಿ ಗಣ ವಿಭಾಗ ಮಾಡಿಸುವುದು.<br>➢ ಮಕ್ಕಳಿಗೆ ಭಾರತೀಯ ಹಬ್ಬಗಳ ಬಗ್ಗೆ ಮಕ್ಕಳಿಂದ ಮಾತನಾಡಿಸುವುದು.<br>➢ ಹಿಂದು, ಮುಸ್ಲೀಂ – ಭಾವೈಕ್ಯತೆಯ ಬಗ್ಗೆ ಮಕ್ಕಳಲ್ಲಿ ಚರ್ಚೆಯನ್ನು ಏರ್ಪಡಿಸುವುದು. | ➢ ಅಭ್ಯಾಸದ ಹಾಳೆ 1 2<br>➢ ರಂಜಾನ್ ಸುರಕುಂಬ ಹಬ್ಬದಲ್ಲಿನ ಜೋಕಾಲಿಯ ಆಟದ ವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. |

ಪದ್ಯಪಾಠ – ನಿಯತಿಯನಾರ್ ಮೀರಿದಪರ್ ಪದ್ಯಪಾಠದ ಲಿಂಕ್

https://www.youtube.com/watch?v=nQScS_kUpIc

**ಪ್ರಥಮ ಭಾಷೆ – ಕನ್ನಡ 9ನೇ ತರಗತಿ ನವೆಂಬರ್–2021**

**ಗದ್ಯಪಾಠ – ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ – ಅಭ್ಯಾಸದ ಹಾಳೆ–01**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ.**

1. ರಾಧಾಕೃಷ್ಣನ್ ಅವರು ಯಾವ ಊರಿನಲ್ಲಿ ಮತ್ತು ಎಷ್ಟನೆಯ ಇಸವಿಯಲ್ಲಿ ಜನಿಸಿದರು?

**ಉತ್ತರ:–** ________________________________________________.

2. ಸ್ಟಾಲಿನ್ ಅವರು ಯಾವ ದೇಶದ ಅಧ್ಯಕ್ಷರಾಗಿದ್ದರು?

**ಉತ್ತರ:–** ________________________________________________.

3. ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು?

**ಉತ್ತರ:–** ________________________________________________

4. ಪ್ರೆಸಿಡೆನ್ಸಿ ಕಾಲೇಜು ಎಂದರೇನು?

**ಉತ್ತರ:–**________________________________________________

5. ರಾಧಾಕೃಷ್ಣನ್‌ರವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯಾವ ವಿಷಯವನ್ನು ಬೋಧಿಸುತ್ತಿದ್ದರು?

**ಉತ್ತರ:–** ________________________________________________

**ಆ. ಕೆಳಗಿನ ಪ್ರಶ್ನೆಗಳಿಗೆ 3/4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?

ಉತ್ತರ:– ________________________________________________

________________________________________________

________________________________________________

2. ಶಿಕ್ಷಣದ ಮಹತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?

ಉತ್ತರ:________________________________________________

________________________________________________

________________________________________________

________________________________________________

**ಇ. ಸಂದರ್ಭ ಸ್ವಾರಸ್ಯವನ್ನು ವಿವರಿಸಿ.**

1. "ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು"

________________________________________________

________________________________________________

________________________________________________

________________________________________________

________________________________________________

**ಪ್ರಥಮ ಭಾಷೆ – ಕನ್ನಡ** **9ನೇ ತರಗತಿ** **ನವೆಂಬರ್–2021**

## ಗದ್ಯಪಾಠ: ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್– (ವ್ಯಾಕರಣ) ಅಭ್ಯಾಸದ ಹಾಳೆ–02

**ಅ. ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದುದನ್ನು ಆರಿಸಿ ಬರೆಯಿರಿ.**

1. 'ಕೆಲಸವನ್ನು' ಪದದಲ್ಲಿರುವ ವಿಭಕ್ತಿ ಪ್ರತ್ಯಯ ______________

   ಅ) ಪ್ರಥಮ–ಉ ಆ) ತೃತೀಯ– ಅನ್ನು ಇ) ದ್ವಿತೀಯ– ಅನ್ನು ಈ) ಚತುರ್ಥಿ – ಗೆ

2. 'ವಿದ್ಯೆ ' ಪದದ ತದ್ಭವ ರೂಪ ________________

   ಅ) ವಿದ್ದೆ ಆ) ಬಿದ್ಯೆ ಇ) ಬಿಜ್ಜೆ ಈ) ಶಿಕ್ಷಣ

**ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1. ಅನುಪಮ : ಎಣೆಯಿಲ್ಲದ : : ಅಮರ : ____________________
2. ಮುಕ್ಕಣ್ಣ : ಶಿವ : : ಚಕ್ರಪಾಣಿ : ____________________
3. ಷಡಾನನ : ಜಶ್ತ್ವಸಂಧಿ : : ಮನಶ್ಶುದ್ಧಿ : ____________________

**ಇ. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ**

1. ವಾಗ್ದೇವಿ:– ________________________________________
2. ಷಡಂಗ :– ________________________________________
3. ಚಿದಾನಂದ:– ________________________________________
4. ಜಯವಾಗಲಿ:– ________________________________________

**ಈ. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿ.**

1. ಹಣೆಗಣ್ಣ :– ________________________________________
2. ನಾಲ್ಮೊಗ :– ________________________________________
3. ಚಕ್ರಪಾಣಿ :– ________________________________________
4. ಫಾಲನೇತ್ರ: – ________________________________________

**ಉ. ಟಿಪ್ಪಣಿ ಬರೆಯಿರಿ.**

1. ವಿವೇಕಾನಂದ:________________________________________

________________________________________

________________________________________

________________________________________

________________________________________

________________________________________

________________________________________

________________________________________

## ಒಂಭತ್ತನೇ ತರಗತಿ – ನವೆಂಬರ್–2021

## ಪದ್ಯಪಾಠ – ನಿಯತಿಯನಾರ್ ಮೀರಿದಪರ್– ಅಭ್ಯಾಸದ ಹಾಳೆ – 01

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ.**

1. ಚಂಡಕರ್ಮ ಯಾರು?

**ಉತ್ತರ:–** ______________________________

2. ಯಶೋಮತಿ ಮತ್ತು ಕುಸುಮಾವಳಿಯ ಅವಳಿ ಮಕ್ಕಳ ಹೆಸರೇನು?

**ಉತ್ತರ:–** ______________________________.

3. ಯಾವ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು?

**ಉತ್ತರ:–** ______________________________

**ಆ. ಕೆಳಗಿನ ಪ್ರಶ್ನೆಗಳಿಗೆ 3/4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1.** ಮಾವಿನ ಮರದಡಿಯಲ್ಲಿ ಉದುರಿದ್ದ ಮುತ್ತುಗದ ಹೂವುಗಳು ಹೇಗೆ ಕಾಣುತ್ತಿದ್ದವು?

**ಉತ್ತರ:–** ______________________________

______________________________

______________________________

**ಇ. ಸಂದರ್ಭ ಸ್ವಾರಸ್ಯವನ್ನು ವಿವರಿಸಿ.**

1. "ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ"

______________________________

______________________________

______________________________

______________________________

**ಈ. ಈ ಕವಿಯ ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

1. ಜನ್ನ :– ______________________________

______________________________

______________________________

**ಉ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.**

**ಮಾರಿ** ____________________

____________________

____________________

____________________ ಬನದೊಳ್।

# ಪದ್ಯಪಾಠ– ನಿಯತಿಯನಾರ್ ಮೀರಿದಪರ್ – (ವ್ಯಾಕರಣಾಂಶ) ಅಭ್ಯಾಸದ ಹಾಳೆ – 02

**ಅ. ಬಿಟ್ಟ ಸ್ಥಳವನ್ನು ಸೂಕ್ತ ಉತ್ತರದೊಂದಿಗೆ ಭರ್ತಿ ಮಾಡಿ.**

1) ಅಕ್ಷರವನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲವನ್ನು _____ ಎನ್ನುವರು.

ಅ) ಮಾತ್ರೆ ಆ) ಗಣ ಇ) ಯತಿ ಈ) ಪಾದ

2) ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರವನ್ನು ________ಎನ್ನುವರು.

ಅ) ಮಾತ್ರೆ ಆ) ಗುರು ಇ) ಲಘು ಈ) ಗಣ

3) ತದ್ವನದೊಳುದಿರ್ದ ಈ ಪದಕ್ಕೆ ಪ್ರಸ್ತಾರ ಹಾಕಿದಾಗ________

ಅ) UUUUUUU ಆ) _UUUU_U ಇ) _UUUUUU ಈ) _ _ UUU_U

**ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಿಸುವ ಪದ ಬರೆಯಿರಿ.**

1) ತರಕ್ಷು : ಹುಲಿ :: ನೀರಜ :___________

2) ಶ್ರೀ : ಸಿರಿ :: ಶಿಶಿರ :___________

3) ಸಪ್ತಮಿ ವಿಭಕ್ತಿ : ಅಧಿಕರಣ :: ಪಂಚಮಿ ವಿಭಕ್ತಿ :___________

**ಇ. ಕೊಟ್ಟಿರುವ ಪದಗಳ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿ.**

1) **ಮಾದರಿ:** ಅರಸಂ = ಪ್ರಥಮ – ಮ್

| | |
|---|---|
| ಮಂಚಿಕೆಯೊಳ್ = | ಚಂಡಮಾರಿಗೆ = |
| ಪರಕೆಗೆ = | ಸತ್ಕುಲದ = |
| ತಳಾರನಂ = | ಬನದಿಂ = |
| ಮಾರಿದತ್ತಂ = | ಮರಕ್ಕೆ = |

**ಈ. ಈ ಪದ್ಯಭಾಗವನ್ನ ಬರೆದುಕೊಂಡು ಪ್ರಸ್ತಾರ ಹಾಕಿ ಗಣವಿಂಗಡಿಸಿ ಛಂದಸ್ಸಿನ ಹೆಸರು ಬರೆಯಿರಿ.**

ಮುನಿಸಮುದಾಯ ಸಮೇತಂ

ವಿನೇಯಜನ ವನಜವನದಿವಾಕರನಂತಾ ।